

ತ್ಯಾಗರಾಜರು ಆ ರಾಜದೂತರಿಗೆ ಹೇಳಿದರು...
ಐಶ್ವರ್ಯ ಮನುಷ್ಯನಿಗೆ ಆನಂದವನ್ನು ತರುವುದಿಲ್ಲ. ಮತ್ತೊಬ್ಬನ ಕೈಕೆಳಗೆ ಕೆಲಸ ಮಾಡಲು ನನಗೆ ಇಷ್ಟವಿಲ್ಲ. ದೇವರ ಸೇವೆ ಮಾತ್ರ ನನಗೆ ನೆಮ್ಮದಿಯನ್ನು ತರುತ್ತದೆ. ಆದುದರಿಂದ ಈ ಸಂಪತ್ತನ್ನೆಲ್ಲಾ ಹಿಂದಕ್ಕೆ ತೆಗೆದುಕೊಂಡು ಹೋಗಿ.
9
ಅವರ ವರ್ತನೆಯಿಂದ ಮನೆಯಲ್ಲಿದ್ದ ಅವರ ಸೋದರರಿಗೆಲ್ಲಾ ತುಂಬಾ ಕೋಪ ಬಂದಿತು. ಅವರು ಇವರ ಬಳಿಯಿದ್ದ ಶ್ರೀರಾಮನ ವಿಗ್ರಹವನ್ನು ಕಾವೇರಿ ನದಿಗೆ ಎಸೆದರು. ವಿಗ್ರಹವನ್ನು ಕಾಣದೆ ತ್ಯಾಗರಾಜರು ತುಂಬಾ ದುಃಖಪಟ್ಟು, ಕೊನೆಗೆ ಧ್ಯಾನದಲ್ಲಿ ಕುಳಿತರು.
ಭಗವಂತ, ನೀನು ನನಗೆ ದರ್ಶನವನ್ನು ಕೊಡುವುದಿಲ್ಲವೆ?
10
ಸುಪ್ರಸನ್ನನಾದ ಭಗವಂತನು ಅವರಿಗೆ ದರ್ಶನವನ್ನಿತ್ತು, ಆ ವಿಗ್ರಹ ಬಿದ್ದಿದ್ದ ಕಾವೇರಿ ನದಿಯತ್ತ ಕೈ ತೋರಿಸಿದನು.
ಶ್ರೀರಾಮ, ಶ್ರೀರಾಮ!
11
ತ್ಯಾಗರಾಜರು ನದಿಗೆ ಓಡಿ ಹೋಗಿ ಅಲ್ಲಿ ಬಿದ್ದಿದ್ದ ವಿಗ್ರಹವನ್ನು ಮತ್ತೆ ಮನೆಗೆ ತಂದರು.
ಓ ರಾಮಾ! ನಿನ್ನ ಅನುಗ್ರಹದಿಂದ ನಾನು ಮತ್ತೆ ನಿನ್ನನ್ನು ಪಡೆದಿದ್ದೇನೆ
12
ಒಮ್ಮೆ ಅವರು ತೀರ್ಥಯಾತ್ರೆಗೆ ಹೊರಟರು. ಕೋವೂರು ಎಂಬ ಊರಿನಲ್ಲಿ ಒಬ್ಬ ಧನವಂತನು ಅವರಿಗೆ ಹಲವಾರು ಬಂಗಾರದ ನಾಣ್ಯಗಳನ್ನು ಕೊಟ್ಟನು. ಆದರೆ ತ್ಯಾಗರಾಜರು ಅದನ್ನೆಲ್ಲ ತಿರಸ್ಕರಿಸಿದರು. ಆ ಶ್ರೀಮಂತನು ಇವರಿಗೆ ತಿಳಿಯದ ಹಾಗೆ ಆ ನಾಣ್ಯಗಳನ್ನು ಇವರ ಪಲ್ಲಕ್ಕಿಯಲ್ಲಿಟ್ಟನು. ತ್ಯಾಗರಾಜರು ತನ್ನ ಪ್ರಯಾಣವನ್ನು ಮುಂದುವರಿಸಿದರು.
13



ಕಾಡಿನ ದಾರಿಯಲ್ಲಿ ಹೋಗುತ್ತಿರುವಾಗ ಕೆಲವು ದರೋಡೆಕೋರರು ಅವರನ್ನು ತಡೆದರು.
14
ನಿನ್ನಲ್ಲಿರುವ ಹಣವನ್ನೆಲ್ಲಾ ನಮಗೆ ಕೊಡು.
ಓ ರಾಮ! ನನ್ನಲ್ಲಿ ಏನಾದರೂ ಹಣವಿದ್ದಲ್ಲಿ ನೀನೇ ಕಾಪಾಡಬೇಕು.
ಆ ಸಮಯಕ್ಕೆ ಸರಿಯಾಗಿ ಎಲ್ಲಿಂದಲೋ ಇಬ್ಬರು ಬೇಟೆಗಾರರು ಬಂದು ದರೋಡೆಕೋರರನ್ನೆಲ್ಲಾ ಓಡಿಸಿದರು.
15
ಕಳ್ಳರೆಲ್ಲಾ ಓಡಿಹೋದ ಮೇಲೆ ಆ ಇಬ್ಬರು ಬೇಟೆಗಾರರೂ ಕಣ್ಮರೆಯಾದರು. ಬಂದಿದ್ದವರು ಶ್ರೀರಾಮಲಕ್ಷ್ಮಣರೆಂದು ತ್ಯಾಗರಾಜರು ಅರಿತರು.
16
ಓ ರಾಮ! ನಿನ್ನ ನಿಜ ರೂಪವನ್ನು ನೋಡುವ ಭಾಗ್ಯ ನನಗಿಲ್ಲವೆ?
ಅವರು ಶ್ರೀರಾಮನ ಕೀರ್ತನೆಗಳನ್ನು ಹಾಡಲು ಶುರುಮಾಡಿದರು.
17
ಓ ರಾಮ, 'ಎಂದಿಗಾಹುದು ನಿನ್ನ ದರುಶನ'?
ಶ್ರೀರಾಮನು ವಿಗ್ರಹದಲ್ಲಿ ನೆಲೆಸಿದ್ದಾನೆ ಎಂಬುದನ್ನು ತ್ಯಾಗರಾಜರು ದೃಢವಾಗಿ ನಂಬಿದ್ದರು. ಅವನನ್ನು ಪ್ರತ್ಯಕ್ಷವಾಗಿ ಕಾಣಬೇಕು ಎಂದು ಅವರು ಹಂಬಲಿಸುತ್ತಿದ್ದರು. ಒಂದು ದಿನ...
18
ತ್ಯಾಗರಾಜ, ಇನ್ನು ಐದು ದಿನಗಳಲ್ಲಿ ನೀನು ನನ್ನನ್ನು ಸೇರುವೆ. ಆದುದರಿಂದ ಸಂನ್ಯಾಸ ಸ್ವೀಕರಿಸು.
ಅಂತೆಯೇ ಐದು ದಿನಗಳಲ್ಲಿ ಅವರಿಗೆ ಶ್ರೀರಾಮನ ದರ್ಶನವಾಯಿತು. 1847ರಲ್ಲಿ ತ್ಯಾಗರಾಜರು ಶ್ರೀರಾಮನಲ್ಲಿ ಐಕ್ಯರಾದರು.







# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಮೇ ೨೦೨೫)

**ಪ್ರಧಾನ ಕೇಂದ್ರ ಬೇಲೂರು ಮಠ:** ಸ್ವಾಮಿ ವಿವೇಕಾನಂದ ಮಂದಿರ ಹಾಗೂ ಸ್ವಾಮಿ ಬ್ರಹ್ಮಾನಂದ ಮಂದಿರಗಳ ಶತಮಾನೋತ್ಸವದ ಅಂಗವಾಗಿ ಬೇಲೂರು ಮಠದಲ್ಲಿ ಏಪ್ರಿಲ್ ೨೫ರಂದು **ನಾರಾಯಣ ಸೇವೆ** ನಡೆಯಿತು. ಇದರಲ್ಲಿ ೧೦೫ ಮಂದಿ ಸಂತಾಲ ಬುಡಕಟ್ಟು ಜನರಿಗೆ ಭೋಜನ ಹಾಗೂ ಉಡುಗೊರೆ ನೀಡಲಾಯಿತು.

**ಶಾಖಾಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು:** **ತಿರುವನಂತಪುರ** ಆಶ್ರಮದ ಉಪಕೇಂದ್ರವಾದ **ನೆಟ್ಟಾಯಂ** ನಲ್ಲಿ ಶ್ರೀ ಶಾರದಾ ಕಾಲೇಜ್ ಆಫ್ ನರ್ಸಿಂಗ್‌ನ ಹೊಸ ಕಟ್ಟಡವನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಮಾರ್ಚ್ ೩೧ರಂದು ಉದ್ಘಾಟಿಸಿದರು. **ಝಾರ್‌ಗ್ರಾಮ** ಕೇಂದ್ರದ ಉಪಕೇಂದ್ರವಾದ **ಶ್ರೀರಾಮಪುರ**ದಲ್ಲಿ ಹೊಸ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ಆರಂಭಿಸಲಾಯಿತು. ಅಸ್ಸಾಂ ರಾಜ್ಯದ **ಕುರಲ್‌ಭಂಗ**ದಲ್ಲಿ ಹೊಸ ರಾಮಕೃಷ್ಣ ಮಿಷನ್ ಕೇಂದ್ರವನ್ನು ಆರಂಭಿಸಲಾಗಿದ್ದು, ಅದರ ಉದ್ಘಾಟನಾ ಸಮಾರಂಭವು ಏಪ್ರಿಲ್ ೬ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು. **ಶ್ಯಾಮ್‌ಸಾಯೇರ್** ಕೇಂದ್ರದಲ್ಲಿ ಶ್ರೀರಾಮಕೃಷ್ಣರ ನೂತನ ವಿಗ್ರಹವನ್ನು ಪರಮಾಧ್ಯಕ್ಷರು ಏಪ್ರಿಲ್ ೬ರಂದು ಲೋಕಾರ್ಪಣೆ ಮಾಡಿದರು. **ರಾಜಾರ್‌ಹಾಟ್ ವಿಷ್ಣುಪುರ** ಕೇಂದ್ರದಲ್ಲಿ ಸ್ವಾಮಿ ನಿರಂಜನಾನಂದರ ವಿಗ್ರಹವನ್ನು ಏಪ್ರಿಲ್ ೮ರಂದು ಪರಮಾಧ್ಯಕ್ಷರು ಅನಾವರಣಗೊಳಿಸಿದರು. **ನಾರಾಯಣಪುರ** ಆಶ್ರಮದ **ಕುಟುಲ್** ಬುಡಕಟ್ಟು ಅಭಿವೃದ್ಧಿ ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಲಾದ ಬಾಲಕರ ವಿದ್ಯಾರ್ಥಿ ನಿಲಯವನ್ನು ಸ್ವಾಮಿ ದಿವ್ಯಾನಂದಜಿ ಉದ್ಘಾಟಿಸಿದರು. ಅಲ್ಲಿ ಹೊಸದಾಗಿ ಸ್ಥಾಪಿಸಲಾದ ಸ್ಟೆಮ್ ಲ್ಯಾಬೋರೇಟರಿಯನ್ನೂ ಅವರು ಉದ್ಘಾಟಿಸಿದರು. **ಚೆನ್ನೈ ಸ್ಟೂಡೆಂಟ್ಸ್ ಹೋಂ**ನಲ್ಲಿ ಮಾರ್ಚ್ ೨೬ರಂದು ಪರಮಾಧ್ಯಕ್ಷರು 'ಕೌಶಲ್ಯ ತರಬೇತಿ ಯೋಜನೆ'ಯನ್ನು ಆರಂಭಿಸಿದರು. ಅವರು **ಗುರಪ್** ಕೇಂದ್ರದಲ್ಲಿ ನಿಯೋಜಿತ ಆಸ್ಪತ್ರೆಯ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿದರು. **ವಿವೇಕಾನಂದ ವಿಶ್ವವಿದ್ಯಾನಿಲಯ (RKMVERI)** ದಲ್ಲಿ ಏಪ್ರಿಲ್ ೧೮ ಹಾಗೂ ೧೯ರಂದು ನಡೆದ 'ವೇದಾಂತದ ಭಕ್ತಿ ಮಾರ್ಗಗಳು' ಎಂಬ ವಿಚಾರ ಸಂಕಿರಣದಲ್ಲಿ ಪರಮಾಧ್ಯಕ್ಷ ಮಹಾರಾಜ್ ಹಾಗೂ ಸ್ವಾಮಿ ಭಜನಾನಂದಜಿ ಮಹಾರಾಜ್ ಮಾತನಾಡಿದರು.




**ಮೌಲ್ಯಶಿಕ್ಷಣ ಕಾರ್ಯಕ್ರಮ ಮತ್ತು ಯುವಸಮ್ಮೇಳನಗಳು:** ಈ ಕೆಳಗಿನ ಶಾಖಾಕೇಂದ್ರಗಳು ಹಲವು ಬಗೆಯ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಮಾರ್ಚ್– ಏಪ್ರಿಲ್ ತಿಂಗಳಲ್ಲಿ ನಡೆಸಿವೆ: ಡಿಗ್‌ಬಾಯ್, ಜಲಪ್ಯಾಗುಡಿ, ಕಾಲಡಿ, ಕಾನ್ಪುರ, ರಾಯಪುರ, ರಾಜಮಹೇಂದ್ರವರಂ, ರಾಜ್‌ಕೋಟ್, ಸೋಮ್‌ಸರ್ ಮತ್ತು ತಂಜಾವೂರು.

**ವೈದ್ಯಕೀಯ ಸೇವೆ ಮತ್ತು ಉಚಿತ ನೇತ್ರ ಚಿಕಿತ್ಸಾ ಶಿಬಿರಗಳು:** ಈ ಕೆಳಗಿನ ಕೇಂದ್ರಗಳು ವಿವಿಧ ಶಿಬಿರಗಳನ್ನು ನಡೆಸಿವೆ: ಬಾಂಕುರ, ಚೆನ್ನೈ ಮಠ, ಕೊಯಂಬತ್ತೂರು ಮಿಷನ್, ಡಿಗ್‌ಬಾಯ್, ಜಮ್ಮು, ಜೆಮ್‌ಶೆಡ್‌ಪುರ, ಕಲ್ಯಾಣಿ, ಲಕ್ನೋ, ಮದುರೈ, ಮೇದಿನೀಪುರ, ಮುಂಬೈ, ನವದ್ವೀಪ, ನಟ್ಟರಾಂಪಳ್ಳಿ, ಪೋರ್‌ಬಂದರ್, ರಾಹರ, ರಾಂಚಿ ಮೊರಾಬಾದಿ, ಸೇಲಂ, ಸಿಲ್‌ಚಾರ್, ತಂಜಾವೂರು, ವಿವೇಕನಗರ ಮತ್ತು ವೃಂದಾವನ.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

# ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್

ನಂ. 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
Website : www.orchidtours.net

Orchid
ನಿಮ್ಮ ಪ್ರವಾಸ ನಮ್ಮೊಂದಿಗೆ

## ರಿಯಾಯಿತಿ ದರದಲ್ಲಿ ಪ್ರವಾಸಗಳು 2025

## 99000 99252

### 3 ದಿನಗಳ ಅಹೋಬಿಲಂ (ನವನಾರಸಿಂಹ ದರ್ಶನ)
ಜ್ವಾಲಾ ನರಸಿಂಹ, ಅಹೋಬಿಲ ನರಸಿಂಹ, ಮಲೋಲ ನರಸಿಂಹ, ಕ್ರೋಧಕರ ನರಸಿಂಹ,
ಕಾರಂಜ ನರಸಿಂಹ, ಭಾರ್ಗವ ನರಸಿಂಹ, ಯೋಗಾನಂದ ನರಸಿಂಹ, ಚತ್ರವತ ನರಸಿಂಹ, ಪವನ ನರಸಿಂಹ,

ನವೆಂಬರ್, ಡಿಸೆಂಬರ್



### 6 ದಿನಗಳ ಬಾಲಿ-ಇಂಡೊನೇಷಿಯ (ಲ್ಯಾಂಡ್ ಆಫ್ ಗಾಡ್)
ಗರುಡ ವಿಷ್ಣು, ಉಲುವಟು ದೇವಸ್ಥಾನ, ಗೋವಾ ಗಜಾ ಕೇವ್

ಜೂನ್, ಸೆಪ್ಟೆಂಬರ್, ಅಕ್ಟೋಬರ್



### 7/11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್
ಎನ್‌ಜಾಯ್ ವಿತ್ ಫ್ಯಾಮಿಲಿ ಅಂಡ್ ಫ್ರೆಂಡ್ಸ್

ಆಗಸ್ಟ್, ಸೆಪ್ಟೆಂಬರ್ ಅಕ್ಟೋಬರ್



### 7 ದಿನಗಳ ಲೇ ಲಡಾಕ್ (ಲ್ಯಾಂಡ್ ಆಫ್ ಬುದ್ದಿಸಮ್)
ಲೇ, ಶ್ಯಾಂ ವ್ಯಾಲಿ, ನುಬ್ರಾ ವ್ಯಾಲಿ, ಟುರ್‌ಟುಕ್ ಪ್ಯಾಂಗಾಂಗ್ ಲೇಕ್

ಜುಲೈ, ಆಗಸ್ಟ್



### 8 ದಿನಗಳ ನೇಪಾಳ ಸ್ಪೆಷಲ್ (ಶ್ರೀ ಮುಕ್ತಿನಾಥ)
ಪಶುಪತಿನಾಥ, ಜಲನಾರಾಯಣ, ಬುದ್ಧ ಸ್ತೂಪ, ಕಠ್ಮಂಡು, ಪೋಕ್ರಾ, ಮನೋಕಾಮನ

ಅಕ್ಟೋಬರ್, ನವೆಂಬರ್



### 18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್ (10 ದೇಶಗಳು)
ಯು.ಕೆ. ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಇಟಲಿ, ಆಸ್ಟ್ರಿಯಾ

ಸೆಪ್ಟೆಂಬರ್, ಅಕ್ಟೋಬರ್



### 7/11 ದಿನಗಳ ವಿಯೆಟ್ನಾಮ್ ಮತ್ತು ಕಾಂಬೋಡಿಯಾ
ಹನಾಯಿ ಸಿಟಿ, ದಾನಾಂಗ್, ಹಾ ಲಾಂಗ್ ಬೇ, ಸೀಮ್ ರೀಪ್, ಪಾಂಪ್ ಪೆನ್

ಅಕ್ಟೋಬರ್, ನವೆಂಬರ್



### 5 /9 ದಿನಗಳ ಕಾಶಿ, ಗಯಾ, ಅಯೋಧ್ಯಾ, ಪ್ರಯಾಗ್‌ರಾಜ್
ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಬೌದ್ಧಗಯಾ ಹಾಗೂ ಇತರೆ

ಸೆಪ್ಟೆಂಬರ್, ಅಕ್ಟೋಬರ್



### 6 ದಿನಗಳ ದುಬೈ ಶಾಪಿಂಗ್ ಫೇಸ್ಟಿವಲ್
ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ, ಅಬುಧಾಬಿ ಸಿಟಿ ಟೂರ್,
ಶಾರ್ಜ ಸಿಟಿ ಟೂರ್, ಮಿರಾಕಲ್ ಗಾರ್ಡನ್, ಗ್ಲೋಬಲ್ ವಿಲೇಜ್ ಹಾಗೂ ಇತರೆ

ಅಕ್ಟೋಬರ್, ನವೆಂಬರ್



### 5 ದಿನಗಳ ಪೂರಿ ಜಗನ್ನಾಥ, ಕೋನಾರ್ಕ್, ಭುವನೇಶ್ವರ್
ಜಗನ್ನಾಥ ಮಂದಿರ, ಸನ್ ಟೆಂಪಲ್, ಲಿಂಗರಾಜ ಟೆಂಪಲ್ ಹಾಗೂ ಇತರೆ

ಅಕ್ಟೋಬರ್, ನವೆಂಬರ್



### 7 ದಿನಗಳ ಜಪಾನ್
ಟೋಕಿಯೋ, ಓಸಾಕ, ಕೊಯೋಟೊ, ನಾರಾ, ಹಿರೋಶಿಮಾ

ಅಕ್ಟೋಬರ್




### 13 ದಿನಗಳ ಚಾರ್‌ಧಾಮ್ ಯಾತ್ರೆ
ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ

ಸೆಪ್ಟೆಂಬರ್



### 6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್)
ಕೊಲೊಂಬೊ, ನಗೊಂಬೊ, ಕ್ಯಾಂಡಿ, ದಾಂಬುಲಾ, ಸೀತಾ ಅಶೋಕವನ

ಜೂನ್, ಸೆಪ್ಟೆಂಬರ್



ಸಂಪರ್ಕಿಸಿ : 9900080793 / 9900093613 / 9900093616